# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಚಾಮರಾಜನಗರ.

**ಸ್ಪೆಷಲ್ ಕೇಸ್ ಸಂಖ್ಯೆ:** 40/2020

**ಚಾಸಾ–9**

**ಫ್ರಾಸಾ–7**

**ದಿನಾಂಕ 22.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಎಸ್.ಲಿಂಗರಾಜು |
| **ತಂದೆಯ ಹೆಸರು** | : | ಲೇಟ್.ಶಿವನಂಜಪ್ಪ |
| **ವಯಸ್ಸು** | : | 55 ವರ್ಷ |
| **ವೃತ್ತಿ** | : | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ |
| **ವಾಸ ಸ್ಥಳ** | : | ಉತ್ತಂಬಳ್ಳಿ ಗ್ರಾಮ. |

ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :-

ನಾನು 2015 ರಿಂದ 2020 ರವರೆಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಆಗಿ ಕೊಳ್ಳೇಗಾಲ ಉಪವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ28.02.2019 ರಂದು ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಯವರಿಂದ ಮೊಕದ್ದಮೆ ಸಂಖ್ಯೆ 314/2018 ರಲ್ಲಿ ಈ ಪ್ರಕರಣದ ಆರೋಪಿಯು ಕಾನೂನು ಬಾಹಿರವಾಗಿ ಜಮೀನಿನಲ್ಲಿ ಗಾಂಜಾ ಗಿಡಗಳನ್ನು ಬೆಳೆದಿದ್ದ. ವ್ಯವಸಾಯಕ್ಕೆ ಉದ್ದೇಶಿತವಾಗಿರುವ ಬಾವಿ/ಬೋರ್ ವೆಲ್ ಗೆ ಹಾಗೂ ವಾಸದ ಮನೆಗೆ ಸಕ್ರಮವಾಗಿ ರಹದಾರಿ ಪಡೆದು ಅಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಾಗಿ ಅಥವಾ ಇಲ್ಲವೇ ಎಂಬುದರ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ವರದಿ ನೀಡುವಂತೆ ಕೋರಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಸಹಾಯಕ ಅಧಿಕಾರಿ ಸತ್ಯರಾಜು

ರವರು ದಿಃ08.03.2019 ರಂದು ಸ್ಥಳ ಪರಿಶೀಲನೆ ಮಾಡಿ SYP 285 ರ ಸ್ಥಳವು ರಾಮರ್ ರವರ ಹೆಸರಿನಲ್ಲಿದ್ದು ಇವರು ದಿಃ21.09.1998 ರಿಂದ ವಿದ್ಯುತ್ ಸಂಪರ್ಕವನ್ನು ಪಡೆದು ಉಪಯೋಗಿಸುತ್ತಿದ್ದಾರೆ. ಇದು ಆರೋಪಿಯ ಅಣ್ಣನ ಹೆಸರಿನಲ್ಲಿರುವುದಾಗಿ ಕಂಡು ಬಂದಿರುತ್ತದೆ. ಹಾಗೂ CPDL 626 ಸ್ಥಾವರ ವಾಸದ ಮನೆಯು ಆರೋಪಿ ರವರ ಹೆಸರಿನಲ್ಲಿರುತ್ತದೆ. ಇವರು ದಿಃ16.12.2009 ರಿಂದ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿರುತ್ತಾರೆ. ನಂತರ ನಾನು ವರದಿಯನ್ನು ನೀಡಿರುತ್ತೇನೆ. ವರದಿಗೆ ಅನುಗುಣವಾಗಿ ದಿಃ08.03.2019 ರಂದು ಕಚೇರಿಯ ಪತ್ರ ಸಂಖ್ಯೆ5733 ರಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಗೆ ವರದಿ ನೀಡಿರುತ್ತೇನೆ ಹಾಗೂ CPDL 626 ಸ್ಥಾವರದ ಮಾಹಿತಿಯನ್ನು ಈ ಕಚೇರಿಗೆ ಕೊಡಲು ವರದಿ ನೀಡಿರುತ್ತೇನೆ.

ಸಾಕ್ಷಿಯು ಶಾಖಾಧಿಕಾರಿಯವರು ಕೊಟ್ಟ ವರದಿಯನ್ನು ಈಗಾಗಲೇ ನಿಪಿ-12 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-12(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ತನಿಖಾಧಿಕಾರಿಗಳಿಗೆ ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು ನಿಪಿ-15 ಎಂದು ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು ಈಗಾಗಲೇ ನಿಪಿ-13 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-13(ಎ)ಎಂದು ಗುರುತಿಸಲಾಯಿತು. ನನ್ನ ವರದಿಯ ಪ್ರಕಾರ ಸದರಿ ದಾಖಲೆಯು ಆರೋಪಿಯ ಹೆಸರಿನಲ್ಲಿತ್ತು.

**<u>ಪಾಟೀ ಸವಾಲು – ಆರೋಪಿ ಪರ ವಕೀಲರಿಂದ –</u>**

ವಿದ್ಯುತ್ ಸಂಪರ್ಕ ಕೊಡಬೇಕಾದರೆ ದಾಖಲೆಯನ್ನು ಪಡೆಯುತ್ತೇವೆ ಎಂದರೆ ಹೌದು. ಆರೋಪಿಯಿಂದ ಸಂಬಂಧಪಟ್ಟ ದಾಖಲೆಯನ್ನು ಪಡೆದಿರುತ್ತೇನೆ. ಗ್ರಾಮ ಪಂಚಾಯಿತಿಯ ದಾಖಲೆಗಳನ್ನು ನ್ಯಾಯಾಲಯಕ್ಕಾಗಲೀ ಹಾಗೂ ಪೊಲೀಸ್ ಠಾಣೆಗಾಗಲೀ ಕೇಳದಿದ್ದ ಕಾರಣ ಕೊಡಲಿಲ್ಲ. ಗ್ರಾಮ ಪಂಚಾಯಿತಿಯ ದಾಖಲೆಗಳಲ್ಲಿ ಜಂಜರ್ ನಂಬರ್ ಮತ್ತು ಅಸ್ಸೆಸ್ಮೆಂಟ್ ನಂಬರ್ ನನಗೆ ಹೇಳಲು ಆಗುವುದಿಲ್ಲ. ವರದಿಯಲ್ಲಿ ಸದರಿ ನಂಬರ್ ಗಳ ಬಗ್ಗೆ ಕೇಳದಿದ್ದ ಕಾರಣ ನಾನು ನಮೂದು ಮಾಡಿರುವುದಿಲ್ಲ. ಆರೋಪಿಯ ರಾಮರ್ ಅಣ್ಣ ಎಂಬುದರ ಬಗ್ಗೆ ನಾನು ಯಾವುದೇ ದಾಖಲೆಯನ್ನು ಪಡೆಯಲಿಲ್ಲ. ರಾಮರ್ ರವರ ತಂದೆಯ ಹೆಸರನ್ನು ನಾನು ವರದಿಯಲ್ಲಿ ನಮೂದು ಮಾಡಿಲ್ಲ.

CPDL 626 ಆರೋಪಿಯ ಹೆಸರಿನಲ್ಲಿ ಇದ್ದ Register copy ಯನ್ನು ನಾನು ಪಡೆದಿರುವುದಿಲ್ಲ. ನಿಪಿ-12, 13 ಮತ್ತು ನಿಪಿ-15 ನ್ನು ಪೊಲೀಸ್ ರ ಒತ್ತಾಯಕ್ಕೆ ಪೂರಕವಾಗಿ ಸೃಷ್ಠಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಸಂಸ್ಥೆಯಿಂದ ವಿದ್ಯುತ್ ಸಂಪರ್ಕ ಪಡೆದಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. CPDL 626 ಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೊಲೀಸ್‌ರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓದಿ ಹೇಳಲಾಗಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಾಮರಾಜನಗರ.**